ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

सत्यमेव जयते

# ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956

(1956ರ ಅಧಿನಿಯಮ ಸಂಖ್ಯೆ 78)

**[19ನೇ ಜುಲೈ, 2001ರಂದು ಇದ್ದಂತೆ]**

# THE HINDU ADOPTIONS AND MAINTENANCE ACT, 1956

**(Act No.78 of 1956)**

**[As on the 19th July 2001]**

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು

ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2001

# ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956

## ಪ್ರಕರಣಗಳ ಅನುಕ್ರಮಣಿಕೆ

### ಅಧ್ಯಾಯ-I

### ಪ್ರಾರಂಭಿಕ

ಪ್ರಕರಣಗಳು:


1. ಚಿಕ್ಕ ಹೆಸರು ಮತ್ತು ವ್ಯಾಪ್ತಿ

2. ಅಧಿನಿಯಮದ ಅನ್ವಯ

3. ಪರಿಭಾಷೆಗಳು

4. ಅಧಿನಿಯಮದ ಅಧ್ಯಾರೋಹಿ ಪರಿಣಾಮ


### ಅಧ್ಯಾಯ-II

### ದತ್ತಕ


5. ಈ ಅಧ್ಯಾಯದಿಂದ ದತ್ತಕಗಳ ವಿನಿಯಮನ

6. ಕಾನೂನು ಮಾನ್ಯ ದತ್ತಕದ ಅವಶ್ಯಕತೆಗಳು

7. ದತ್ತಕ ತೆಗೆದುಕೊಳ್ಳಲು ಹಿಂದೂ ಪುರುಷನ ಅರ್ಹತೆ

8. ದತ್ತಕ ತೆಗೆದುಕೊಳ್ಳಲು ಹಿಂದೂ ಮಹಿಳೆಯ ಅರ್ಹತೆ

9. ದತ್ತಕ ಕೊಡಲು ಅರ್ಹತೆಯುಳ್ಳ ವ್ಯಕ್ತಿಗಳು

10. ದತ್ತಕಕ್ಕೆ ತೆಗೆದುಕೊಳ್ಳಲ್ಪಡಬಹುದಾದ ವ್ಯಕ್ತಿಗಳು

11. ಕಾನೂನು ಮಾನ್ಯ ದತ್ತಕದ ಬಗ್ಗೆ ಇತರ ಷರತ್ತುಗಳು

12. ದತ್ತಕದ ಪರಿಣಾಮಗಳು

13. ತಮ್ಮ ಸ್ವತ್ತುಗಳನ್ನು ವಿಲೆ ಮಾಡಲು ದತ್ತಕ ತಂದೆ ತಾಯಿಗಳ ಹಕ್ಕು

14. ಕೆಲವು ಸಂದರ್ಭಗಳಲ್ಲಿ ದತ್ತಕ ತಾಯಿಯನ್ನು ನಿರ್ಧರಿಸುವಿಕೆ

15. ಕಾನೂನು ಮಾನ್ಯ ದತ್ತಕವು ರದ್ದಾಗತಕ್ಕುದಲ್ಲ

16. ದತ್ತಕಗಳಿಗೆ ಸಂಬಂಧಿಸಿದ ನೋಂದಾಯಿತ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ

17. ಕೆಲವು ಸಂದಾಯಗಳ ನಿಷೇಧ

## ಅಧ್ಯಾಯ-III

### ಜೀವನಾಂಶ

18. ಪತ್ನಿಯ ಪೋಷಣೆ

19. ವಿಧವೆಯಾದ ಸೊಸೆಯ ಪೋಷಣೆ

20. ಮಕ್ಕಳ ಮತ್ತು ವೃದ್ಧ ತಂದೆ ತಾಯಿಗಳ ಪೋಷಣೆ

21. ಆಶ್ರಿತರು ಎಂಬುದರ ಪರಿಭಾಷೆ

22. ಆಶ್ರಿತರ ಪೋಷಣೆ

23. ಜೀವನಾಂಶದ ಮೊಬಲಗು

24. ಜೀವನಾಂಶದ ಕ್ಲೇಮುದಾರನು ಹಿಂದುವಾಗಿರತಕ್ಕುದು

25. ಸನ್ನಿವೇಶಗಳ ಬದಲಾವಣೆಯಿಂದ ಜೀವನಾಂಶದ ಮೊಬಲಗನ್ನು ವ್ಯತ್ಯಾಸ ಮಾಡಬಹುದು

26. ಋಣಗಳಿಗೆ ಆದ್ಯತೆ ಇರಬೇಕು

27. ಜೀವನಾಂಶವು ಯಾವಾಗ ಪ್ರಭಾರವಾಗತಕ್ಕುದು

28. ಜೀವನಾಂಶದ ಹಕ್ಕಿನ ಮೇಲೆ ಸ್ವತ್ತಿನ ವರ್ಗಾವಣೆಯ ಪರಿಣಾಮ

## ಅಧ್ಯಾಯ-IV

### ನಿರಸನಗಳು ಮತ್ತು ಉಳಿಸುವಿಕೆಗಳು

29.ನಿರಸನಗಳು

30. ಉಳಿಸುವಿಕೆಗಳು

# ಮುನ್ನುಡಿ

19ನೇ ಜುಲೈ, 2001 ರಂದು ಇದ್ದಂತೆ, ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 29 ರಿಂದ 36ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಡಾ॥ ಸುಭಾಷ್ ಸಿ. ಜೈನ್,
ಕಾರ್ಯದರ್ಶಿ,
ವಿಧಾಯೀ ಇಲಾಖೆ
ಭಾರತ ಸರ್ಕಾರ

ನವದೆಹಲಿ

# PREFACE

This Edition of The Hindu Adoptions And Maintenance Act, 1956 as on the 19th July 2001 contains the authoritative Text of that Act in Kannada which was published in the Gazette of India Extraordinary, Part IX, Section 1, No. 1, Vol. 20, dated: 17-9-2001 on pages 29 to 36.

This Kannada Text was published under the authority of the President under clause (a) of Section 2 of The Authoritative Texts (Central Laws) Act, 1973 and on such publication it became the authoritative text of that Act in Kannada.

Dr. Subhash C. Jain,
Secretary,
Legislative Department
Government of India.

New Delhi

# ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956

(1956ರ 78ನೇ ಅಧಿನಿಯಮ)

[ಡಿಸೆಂಬರ್ 21, 1956]

ಹಿಂದೂಗಳಲ್ಲಿ ದತ್ತಕ ಮತ್ತು ಜೀವನಾಂಶಕ್ಕೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಅಧಿನಿಯಮ.

ಭಾರತ ಗಣರಾಜ್ಯದ ಏಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ:- (1) ಈ ಅಧಿನಿಯಮವನ್ನು ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಅಧಿನಿಯಮದ ಅನ್ವಯ:- (1) ಈ ಅಧಿನಿಯಮವು-

(ಎ) ವೀರಶೈವ, ಲಿಂಗಾಯಿತ ಅಥವಾ ಬ್ರಹ್ಮೊ, ಪ್ರಾರ್ಥನಾ ಅಥವಾ ಆರ್ಯ ಸಮಾಜದ ಅನುಯಾಯಿಗಳೂ ಸೇರಿ ಯಾವುದೇ ರೂಪ ಅಥವಾ ವಿಕಾಸಗಳನ್ನೊಳಗೊಂಡ ಹಿಂದೂ ಮತದ ಯಾವನೇ ವ್ಯಕ್ತಿಗೆ;

(ಬಿ) ಬೌದ್ಧ, ಜೈನ ಅಥವಾ ಸಿಖ್ಖ ಮತದ ಯಾವನೇ ವ್ಯಕ್ತಿಗೆ; ಮತ್ತು

(ಸಿ) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಇಲ್ಲಿ ಹೇಳಿದ ಯಾವುವೇ ವಿಷಯಗಳ ಬಗ್ಗೆ ಅವನು ಹಿಂದೂ ಕಾನೂನಿಗೆ ಅಥವಾ ಅಂಥ ಕಾನೂನಿನ ಭಾಗವಾಗಿರುವ ಯಾವುದೇ ರೂಢಿಗೆ ಅಥವಾ ಆಚರಣೆಗೆ ಒಳಪಡುತ್ತಿದ್ದಿಲ್ಲವೆಂದು ರುಜುವಾತುಪಡಿಸಿದ ಹೊರತು, ಮುಸ್ಲಿಮ, ಕ್ರೈಸ್ತ, ಪಾರ್ಸಿ ಅಥವಾ ಯಹೂದಿ ಮತದ ಯಾವನೇ ಇತರ ವ್ಯಕ್ತಿಗೆ

-ಅನ್ವಯಿಸುತ್ತದೆ.

ವಿವರಣೆ:- ಈ ಕೆಳಗಿನ ವ್ಯಕ್ತಿಗಳು, ಸಂದರ್ಭಾನುಸಾರ, ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿರುತ್ತಾರೆ:-

(ಎ) ತಂದೆ ತಾಯಿಗಳಿಬ್ಬರು ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿದ್ದು, ಅವರ ಯಾವುದೇ ಔರಸ ಅಥವಾ ಅನೌರಸ ಮಗು;

(ಬಿ) ತಂದೆ ತಾಯಿಗಳಲ್ಲೊಬ್ಬರು ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿದ್ದು ಅಂಥ ತಂದೆ ಅಥವಾ ತಾಯಿಯು ಸೇರಿರುವ ಅಥವಾ ಸೇರಿದ್ದ ತಂಡದ, ಜನಾಂಗದ ಗುಂಪಿನ ಅಥವಾ ಕುಟುಂಬದ ವ್ಯಕ್ತಿಯಂತೆ ಬೆಳೆದು ಬಂದ ಯಾವುದೇ ಔರಸ ಅಥವಾ ಅನೌರಸ ಮಗು; ಮತ್ತು

(ಬಿಬಿ) ತಂದೆ ತಾಯಿಗಳಿಬ್ಬರಿಂದಲೂ ಪರಿತ್ಯಕ್ತವಾದ ಅಥವಾ ತಂದೆ ತಾಯಿಗಳು ಗೊತ್ತಿರದ ಮತ್ತು ಈ ಎರಡು ಸಂದರ್ಭಗಳಲ್ಲಿ ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಆಗಿ ಬೆಳೆಸಲ್ಪಟ್ಟಿರುವ ಯಾವುದೇ ಔರಸ ಅಥವಾ ಅನೌರಸ ಮಗು; ಮತ್ತು

(ಸಿ) ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಆಗಿ ಮತಾಂತರಿತನಾದ ಅಥವಾ ಪುನರ್ಮತಾಂತರಿತನಾದ ಯಾವನೇ ವ್ಯಕ್ತಿ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನ್ಯಥಾ ನಿರ್ದೇಶಿಸುವ ಹೊರತು, ಸಂವಿಧಾನದ 366ನೇ ಅನುಚ್ಛೇದದ (25)ನೇ ಖಂಡದ ಅರ್ಥ ವ್ಯಾಪ್ತಿಯೊಳಗೆ ಬರುವ ಯಾವುದೇ ಅನುಸೂಚಿತ ಬುಡಕಟ್ಟಿನವರಿಗೆ ಅನ್ವಯಿಸತಕ್ಕುದಲ್ಲ.

(3) ಈ ಅಧಿನಿಯಮದ ಯಾವುದೇ ಭಾಗದಲ್ಲಿ ಬರುವ "ಹಿಂದೂ" ಎಂಬ ಪದವನ್ನು ಹಿಂದೂ ಮತದವನಾಗಿರದಿದ್ದರೂ ಈ ಪ್ರಕರಣದಲ್ಲಿರುವ ಉಪಬಂಧಗಳ ಆಧಾರದ ಮೇಲೆ ಈ ಅಧಿನಿಯಮವು ಅನ್ವಯಿಸುವ ವ್ಯಕ್ತಿಯನ್ನು ಅದು ಒಳಗೊಳ್ಳುತ್ತದೆ ಎಂಬಂತೆ ಅರ್ಥಮಾಡತಕ್ಕುದು.

3. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) "ರೂಢಿ" ಮತ್ತು "ಆಚರಣೆ" ಎಂಬ ಪದಗಳು, ನಿರಂತರವಾಗಿ ಮತ್ತು ಏಕಪ್ರಕಾರವಾಗಿ ದೀರ್ಘಕಾಲ ಅನುಸರಿಸಲ್ಪಟ್ಟ ಕಾರಣದಿಂದ ಯಾವುದೇ ಸ್ಥಳೀಯ ಪ್ರದೇಶ, ಬುಡಕಟ್ಟು, ಸಮುದಾಯ, ಗುಂಪು ಅಥವಾ ಕುಟುಂಬದಲ್ಲಿರುವ ಹಿಂದೂಗಳೊಳಗೆ ಕಾನೂನು ಬಲ ಪಡೆದಿರುವ ಯಾವುದೇ ನಿಯಮವನ್ನು ಸೂಚಿಸುತ್ತವೆ:

ಪರಂತು, ಆ ನಿಯಮವು ನಿಶ್ಚಿತವಾದುದು ಮತ್ತು ಅಯುಕ್ತವಲ್ಲದ್ದು ಅಥವಾ ಸಾರ್ವಜನಿಕ ನೀತಿಗೆ ವಿರೋಧವಲ್ಲದ್ದೂ ಆಗಿರಬೇಕು:

ಮತ್ತೂ ಪರಂತು, ಒಂದು ಕುಟುಂಬಕ್ಕೆ ಮಾತ್ರ ಅನ್ವಯಿಸಬಹುದಾದ ಒಂದು ನಿಯಮದ ಸಂದರ್ಭದಲ್ಲಿ ಆ ಕುಟುಂಬವು ಅದನ್ನು ತ್ಯಜಿಸಿರಬಾರದು;

(ಬಿ) "ಜೀವನಾಂಶ" ಎಂಬುದು-

(i) ಎಲ್ಲ ಸಂದರ್ಭಗಳಲ್ಲೂ ಆಹಾರ, ಬಟ್ಟೆಬರೆ, ವಸತಿ, ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಉಪಚಾರ ಮತ್ತು ಚಿಕಿತ್ಸೆಗೆ ಅವಕಾಶವನ್ನೂ,

(ii) ಅವಿವಾಹಿತ ಮಗಳ ಸಂದರ್ಭದಲ್ಲಿ, ಅವಳ ಮದುವೆಗೆ ತಗುಲಬಹುದಾದ ಯುಕ್ತ ಮತ್ತು ಆನುಷಂಗಿಕ ವೆಚ್ಚಗಳನ್ನೂ

-ಒಳಗೊಳ್ಳುತ್ತದೆ;

(ಸಿ) "ಅಪ್ರಾಪ್ತ ವಯಸ್ಕ" ಎಂದರೆ ಹದಿನೆಂಟು ವರ್ಷ ಪೂರ್ತಿಯಾಗದವನು ಅಥವಾ ಪೂರ್ತಿಯಾಗದವಳು.

4. ಅಧಿನಿಯಮದ ಅಧ್ಯಾರೋಹಿ ಪರಿಣಾಮ.- ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು,-

(ಎ) ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿನ ಯಾವುದೇ ಶಾಸ್ತ್ರವಾಕ್ಯ, ನಿಯಮ ಅಥವಾ ಅರ್ಥ ವಿವರಣೆಯು ಅಥವಾ ಆ ಕಾನೂನಿನ ಭಾಗವಾಗಿರುವ ಯಾವುದೇ ರೂಢಿ ಅಥವಾ ಆಚರಣೆಯು, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ವಿಷಯದ ಬಗ್ಗೆ ಪರಿಣಾಮಕಾರಿಯಾಗುವುದು ಕೊನೆಗೊಳ್ಳತಕ್ಕುದು;

(ಬಿ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು, ಈ ಅಧಿನಿಯಮದಲ್ಲಿರುವ ಯಾವುದೇ ಉಪಬಂಧಗಳಿಗೆ ಅದು ಅಸಂಗತವಾಗಿರುವ ಮಟ್ಟಿಗೆ, ಹಿಂದೂಗಳಿಗೆ ಅನ್ವಯವಾಗುವುದು ಕೊನೆಗೊಳ್ಳತಕ್ಕುದು.

## ಅಧ್ಯಾಯ-II

### ದತ್ತಕ

5. ಈ ಅಧ್ಯಾಯದಿಂದ ದತ್ತಕಗಳ ವಿನಿಯಮನ:- (1) ಈ ಅಧ್ಯಾಯದಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿ ಹೊರತು, ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವ ಹಿಂದುವೂ ದತ್ತಕ ತೆಗೆದುಕೊಳ್ಳತಕ್ಕುದಲ್ಲ ಅಥವಾ ಕೊಡತಕ್ಕುದಲ್ಲ, ಮತ್ತು ಉಕ್ತ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಯಾವುದೇ ದತ್ತಕವು ಶೂನ್ಯವಾಗತಕ್ಕುದು.

(2) ಅವನು ಅಥವಾ ಅವಳು ದತ್ತಕ ಕಾರಣದಿಂದಲ್ಲದೆ ತನ್ನ ಪರವಾಗಿ ದತ್ತಕ ಕುಟುಂಬದಲ್ಲಿ ಆರ್ಜಿಸಲು ಸಾಧ್ಯವಾಗದಿದ್ದ ಯಾವುವೇ ಹಕ್ಕುಗಳನ್ನು ಶೂನ್ಯದತ್ತಕವು ಸೃಜಿಸತಕ್ಕುದಲ್ಲ ಅಥವಾ ಆತನು ಅಥವಾ ಅವಳು ಹುಟ್ಟಿದ ಕುಟುಂಬದಲ್ಲಿಯ ಅವರ ಹಕ್ಕುಗಳನ್ನು ನಾಶಪಡಿಸತಕ್ಕುದಲ್ಲ.

6. ಕಾನೂನು ಮಾನ್ಯ ದತ್ತಕದ ಅವಶ್ಯಕತೆಗಳು:- ಯಾವ ದತ್ತಕವೂ-

(i) ದತ್ತಕ ತೆಗೆದುಕೊಳ್ಳುವ ವ್ಯಕ್ತಿಗೆ ದತ್ತಕ ತೆಗೆದುಕೊಳ್ಳಲು ಅರ್ಹತೆ ಮತ್ತು ಹಕ್ಕು ಇದ್ದ ಹೊರತು;

(ii) ದತ್ತಕ ಕೊಡುವ ವ್ಯಕ್ತಿಗೆ ಹಾಗೆ ಮಾಡಲು ಅರ್ಹತೆ ಇದ್ದ ಹೊರತು;

(iii) ದತ್ತಕ ವ್ಯಕ್ತಿಯು ದತ್ತಕಕ್ಕೆ ಅರ್ಹನಾಗಿದ್ದ ಹೊರತು; ಮತ್ತು

(iv) ದತ್ತಕವನ್ನು ಈ ಅಧ್ಯಾಯದಲ್ಲಿ ನಮೂದಿಸಿದ ಇತರ ಷರತ್ತುಗಳನ್ನು ಅನುವರ್ತಿಸಿ ಮಾಡಲಾಗಿದ್ದ ಹೊರತು

-ಕಾನೂನು ಮಾನ್ಯವಾಗತಕ್ಕುದಲ್ಲ.

7. ದತ್ತಕ ತೆಗೆದುಕೊಳ್ಳಲು ಹಿಂದೂ ಪುರುಷನ ಅರ್ಹತೆ:- ಸ್ವಸ್ಥ ಚಿತ್ತವುಳ್ಳ ಮತ್ತು ಅಪ್ರಾಪ್ತ ವಯಸ್ಕನಲ್ಲದ ಯಾವನೇ ಹಿಂದೂ ಪುರುಷನು, ಮಗನನ್ನು ಅಥವಾ ಮಗಳನ್ನು ದತ್ತಕ ತೆಗೆದುಕೊಳ್ಳಲು ಅರ್ಹನಾಗಿರುತ್ತಾನೆ:

ಪರಂತು, ಅವನ ಪತ್ನಿಯು ಜೀವಿಸಿರುವಲ್ಲಿ, ಅವಳು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರುವ ಅಥವಾ ಹಿಂದುವಾಗಿರುವುದು ಕೊನೆಗೊಂಡಿರುವ ಅಥವಾ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯವು ಅವಳನ್ನು ಅಸ್ವಸ್ಥಚಿತ್ತಳೆಂದು ಘೋಷಿಸಿದ್ದ ಹೊರತು, ಅವನು ತನ್ನ ಪತ್ನಿಯ ಸಮ್ಮತಿ ಇಲ್ಲದೆ ಯಾವುದೇ ದತ್ತಕ ಮಾಡಿಕೊಳ್ಳತಕ್ಕುದಲ್ಲ.

ವಿವರಣೆ:- ದತ್ತಕದ ಸಮಯದಲ್ಲಿ ಒಬ್ಬ ವ್ಯಕ್ತಿಗೆ ಒಬ್ಬಳಿಗಿಂತ ಹೆಚ್ಚು ಪತ್ನಿಯರು ಜೀವಿಸಿರುವಲ್ಲಿ, ಹಿಂದಿನ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಪೈಕಿ ಯಾವುದೊಂದರಿಂದಾಗಿ ಅವರಲ್ಲಿ ಯಾರೊಬ್ಬರ ಸಮ್ಮತಿಯು ಅನಾವಶ್ಯಕವಾಗಿದ್ದ ಹೊರತು ಎಲ್ಲ ಪತ್ನಿಯರ ಸಮ್ಮತಿಯೂ ಅವಶ್ಯಕವಿರುತ್ತದೆ.

8. ದತ್ತಕ ತೆಗೆದುಕೊಳ್ಳಲು ಹಿಂದೂ ಮಹಿಳೆಯ ಅರ್ಹತೆ :- ಯಾವಳೇ ಹಿಂದೂ ಮಹಿಳೆಯು,

(ಎ) ಸ್ವಸ್ಥಚಿತ್ತಳಾಗಿದ್ದರೆ;

(ಬಿ) ಅಪ್ರಾಪ್ತ ವಯಸ್ಕಳಲ್ಲದಿದ್ದರೆ ; ಮತ್ತು

(ಸಿ) ಅವಿವಾಹಿತಳಾಗಿದ್ದರೆ ಅಥವಾ ವಿವಾಹಿತಳಾಗಿದ್ದೂ, ಅವಳ ವಿವಾಹವು ವಿಘಟಿತವಾಗಿದ್ದರೆ ಅಥವಾ ಅವಳ ಪತಿಯು ಮೃತನಾಗಿದ್ದರೆ ಅಥವಾ ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿದ್ದರೆ ಅಥವಾ ಹಿಂದೂವಾಗಿರುವುದು ಕೊನೆಗೊಂಡಿದ್ದರೆ ಅಥವಾ ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯವು ಅವನನ್ನು ಅಸ್ವಸ್ಥಚಿತ್ತನೆಂದು ಘೋಷಿಸಿದ್ದರೆ-

-ಅವಳು ಮಗನನ್ನು ಅಥವಾ ಮಗಳನ್ನು ದತ್ತಕ ತೆಗೆದುಕೊಳ್ಳಲು ಅರ್ಹಳಾಗಿರುತ್ತಾಳೆ.

9. ದತ್ತಕ ಕೊಡಲು ಅರ್ಹತೆಯುಳ್ಳ ವ್ಯಕ್ತಿಗಳು :- (1) ಮಗುವಿನ ತಂದೆ ಅಥವಾ ತಾಯಿ ಅಥವಾ ಪಾಲಕನ ಹೊರತು, ಯಾವ ವ್ಯಕ್ತಿಯೂ ಮಗುವನ್ನು ದತ್ತಕ ಕೊಡಲು ಅರ್ಹನಾಗಿರತಕ್ಕುದಲ್ಲ.

(2) ತಂದೆಯು ಜೀವಂತನಾಗಿದ್ದಲ್ಲಿ, (3) ಮತ್ತು (4)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಅವನು ಮಾತ್ರ ದತ್ತಕ ಕೊಡಲು ಅಧಿಕಾರವುಳ್ಳವನಾಗಿರತಕ್ಕುದು, ಆದರೆ ತಾಯಿಯು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಲಿರುವ ಅಥವಾ ಹಿಂದೂ ಆಗಿರುವುದು ಕೊನೆಗೊಂಡಿರುವ ಅಥವಾ ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ಅಸ್ವಸ್ಥಚಿತ್ತಳೆಂದು ಘೋಷಿತಳಾಗಿರುವ ಹೊರತು, ಅಂಥ ಅಧಿಕಾರವನ್ನು ತಾಯಿಯ ಸಮ್ಮತಿಯಿಲ್ಲದೆಯೇ ಚಲಾಯಿಸತಕ್ಕುದಲ್ಲ.

(3) ತಂದೆಯು ಮರಣ ಹೊಂದಿರುವಲ್ಲಿ ಅಥವಾ ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರುವಲ್ಲಿ ಅಥವಾ ಹಿಂದೂ ಆಗಿರುವುದು ಕೊನೆಗೊಂಡಿರುವಲ್ಲಿ, ಅಥವಾ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ಅಸ್ವಸ್ಥಚಿತ್ತನೆಂದು ಘೋಷಿತನಾಗಿರುವಲ್ಲಿ, ತಾಯಿಯು ಮಗುವನ್ನು ದತ್ತಕ ಕೊಡಬಹುದು.

(4) ತಂದೆ ಮತ್ತು ತಾಯಿಗಳಿಬ್ಬರೂ ಮೃತರಾಗಿರುವಲ್ಲಿ ಅಥವಾ ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರುವಲ್ಲಿ ಅಥವಾ ಮಗುವನ್ನು ತ್ಯಜಿಸಿರುವಲ್ಲಿ ಅಥವಾ ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ಅಸ್ವಸ್ಥಚಿತ್ತರೆಂದು ಘೋಷಿತರಾಗಿರುವಲ್ಲಿ ಅಥವಾ ಮಗುವಿನ ತಂದೆ ತಾಯಿಗಳು ಯಾರೆಂಬುದು ಗೊತ್ತಿಲ್ಲದಿರುವಲ್ಲಿ ಮಗುವಿನ ಪಾಲಕನು, ನ್ಯಾಯಾಲಯದ ಪೂರ್ವಾನುಮತಿಯನ್ನು ಪಡೆದು ತನ್ನನ್ನೂ ಒಳಗೊಂಡು ಯಾವನೇ ವ್ಯಕ್ತಿಗೆ ಮಗುವನ್ನು ದತ್ತಕ ಕೊಡಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ಒಬ್ಬ ಪಾಲಕನಿಗೆ ಅನುಮತಿಯನ್ನು ಕೊಡುವ ಮೊದಲು, ನ್ಯಾಯಾಲಯವು, ಈ ಉದ್ದೇಶಕ್ಕಾಗಿ ಮಗುವಿನ ವಯಸ್ಸು ಮತ್ತು ತಿಳಿವಳಿಕೆಯನ್ನು ಗಮನದಲ್ಲಿಟ್ಟುಕೊಂಡು ಅದರ ಇಚ್ಛೆ ಗಳನ್ನು ಯುಕ್ತವಾಗಿ ಪರಿಗಣಿಸಿ ದತ್ತಕವು ಮಗುವಿನ ಕಲ್ಯಾಣಕ್ಕಾಗಿರುವುದೆಂದೂ ಮತ್ತು ಅನುಮತಿ ಕೇಳುವ ಅರ್ಜಿದಾರನು, ದತ್ತಕದ ಪ್ರತಿಫಲವಾಗಿ ನ್ಯಾಯಾಲಯವು ಮಂಜೂರ್ಮಾಡಬಹುದಾದಂಥ ಸಂದಾಯ ಅಥವಾ ಬಹುಮಾನವನ್ನುಳಿದು ಯಾವುದೇ ಸಂದಾಯ ಅಥವಾ ಬಹುಮಾನವನ್ನು ಸ್ವೀಕರಿಸಿಲ್ಲವೆಂದು ಅಥವಾ ಸ್ವೀಕರಿಸಲು ಒಪ್ಪಿಲ್ಲವೆಂದು ಮತ್ತು ಯಾವನೇ ವ್ಯಕ್ತಿಯು ಅರ್ಜಿದಾರನಿಗೆ ಯಾವುದೇ ಸಂದಾಯವನ್ನು ಮಾಡಿಲ್ಲವೆಂದು ಅಥವಾ ಬಹುಮಾನವನ್ನು ಕೊಟ್ಟಿಲ್ಲವೆಂದು ಅಥವಾ ಹಾಗೆ ಮಾಡಲು ಅಥವಾ ಕೊಡಲು ಒಪ್ಪಿಲ್ಲವೆಂದು ಮನದಟ್ಟು ಮಾಡಿಕೊಳ್ಳತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ-

(i) "ತಂದೆ" ಮತ್ತು "ತಾಯಿ" ಎಂಬ ಪದಗಳು ದತ್ತಕ ತಂದೆಯನ್ನು ಮತ್ತು ದತ್ತಕ ತಾಯಿಯನ್ನು ಒಳಗೊಂಡಿರುವುದಿಲ್ಲ;

(iಎ) "ಪಾಲಕ" ಎಂದರೆ ಮಗುವಿನ ದೇಹದ ಅಥವಾ ದೇಹ ಮತ್ತು ಸ್ವತ್ತು ಇವೆರಡರ ರಕ್ಷಕನಾಗಿರುವ ವ್ಯಕ್ತಿ ಮತ್ತು ಇದು-

(ಎ) ಮಗುವಿನ ತಂದೆಯ ಅಥವಾ ತಾಯಿಯ ಮರಣ ಶಾಸನದ ಮೂಲಕ ನೇಮಿತನಾದ ಪಾಲಕನನ್ನು; ಮತ್ತು

(ಬಿ) ನ್ಯಾಯಾಲಯದಿಂದ ನೇಮಿತನಾದ ಅಥವಾ ಘೋಷಿತನಾದ ಪಾಲಕನನ್ನು ಒಳಗೊಳ್ಳುತ್ತದೆ;

(ii) "ನ್ಯಾಯಾಲಯ" ಎಂದರೆ ದತ್ತಕ ತೆಗೆದುಕೊಳ್ಳಲಿರುವ ಮಗುವು ಸಾಮಾನ್ಯವಾಗಿ ವಾಸಿಸುವ ಸ್ಥಳೀಯ ಪರಿಮಿತಿಗಳ ಮೇಲೆ ಅಧಿಕಾರವ್ಯಾಪ್ತಿಯನ್ನುಳ್ಳ ನಗರ ಸಿವಿಲ್ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯ.

10. ದತ್ತಕ ತೆಗೆದುಕೊಳ್ಳಲ್ಪಡಬಹುದಾದ ವ್ಯಕ್ತಿಗಳು:- ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ಹೊರತು, ದತ್ತಕ ತೆಗೆದುಕೊಳ್ಳಲ್ಪಡಲು ಯಾವ ವ್ಯಕ್ತಿಯೂ ಅರ್ಹನಾಗತಕ್ಕುದಲ್ಲ ಎಂದರೆ:-

(i) ಅವನು ಅಥವಾ ಅವಳು ಹಿಂದುವಾಗಿರಬೇಕು;

(ii) ಅವನು ಅಥವಾ ಅವಳು ಈ ಮೊದಲೇ ದತ್ತಕವಾಗಿರಕೂಡದು;

(iii) ಪಕ್ಷಕಾರರಿಗೆ ಅನ್ವಯಿಸಬಹುದಾದ, ವಿವಾಹಿತ ವ್ಯಕ್ತಿಗಳನ್ನು ದತ್ತಕ ತೆಗೆದುಕೊಳ್ಳಲು ಅವಕಾಶ ಕೊಡುವ ರೂಢಿ ಅಥವಾ ಆಚರಣೆಯು ಇದ್ದ ಹೊರತು, ಅವನು ಅಥವಾ ಅವಳು ವಿವಾಹಿತರಾಗಿರಕೂಡದು;

(iv) ಪಕ್ಷಕಾರರಿಗೆ ಅನ್ವಯಿಸಬಹುದಾದ ಹದಿನೈದು ವರ್ಷಗಳು ತುಂಬಿದ ವ್ಯಕ್ತಿಗಳನ್ನು ದತ್ತಕ ತೆಗೆದುಕೊಳ್ಳಲು ಅವಕಾಶಕೊಡುವ ರೂಢಿ ಅಥವಾ ಆಚರಣೆಯು ಇದ್ದ ಹೊರತು, ಅವನಿಗೆ ಅಥವಾ ಅವಳಿಗೆ ಹದಿನೈದು ವರ್ಷ ತುಂಬಿರಕೂಡದು.

11. ಕಾನೂನು ಮಾನ್ಯ ದತ್ತಕದ ಬಗ್ಗೆ ಇತರ ಷರತ್ತುಗಳು:- ಪ್ರತಿಯೊಂದು ದತ್ತಕದಲ್ಲೂ ಈ ಕೆಳಕಂಡ ಷರತ್ತುಗಳನ್ನು ಪಾಲಿಸಲೇಬೇಕು:-

(i) ಮಗನನ್ನು ದತ್ತಕ ತೆಗೆದುಕೊಳ್ಳುವಲ್ಲಿ, ದತ್ತಕ ತಂದೆ ಅಥವಾ ತಾಯಿಗೆ ಜೀವಂತವಿರುವ ಹಿಂದೂ ಮಗ, ಅಥವಾ ಮಗನ ಮಗ ಅಥವಾ ಮಗನ ಮಗನು (ಔರಸ ರಕ್ತ ಸಂಬಂಧದವನೇ ಇರಲಿ ದತ್ತಕದವನೇ ಇರಲಿ) ದತ್ತಕದ ಸಮಯದಲ್ಲಿ ಇರಬಾರದು;

(ii) ಮಗಳನ್ನು ದತ್ತಕ ತೆಗೆದುಕೊಳ್ಳುವಲ್ಲಿ, ದತ್ತಕ ತಂದೆ ಅಥವಾ ತಾಯಿಗೆ ಜೀವಂತವಾಗಿರುವ ಹಿಂದೂ ಮಗಳು ಅಥವಾ ಮಗನ ಮಗಳು (ಔರಸ ರಕ್ತ ಸಂಬಂಧದವಳೇ ಇರಲಿ ದತ್ತಕದವಳೇ ಇರಲಿ) ದತ್ತಕದ ಸಮಯದಲ್ಲಿ ಇರಬಾರದು;

(iii) ಪುರುಷನು ದತ್ತಕ ತೆಗೆದುಕೊಳ್ಳುವಲ್ಲಿ ಮತ್ತು ಮಹಿಳೆಯು ದತ್ತಕವಾಗಬೇಕಾಗಿರುವಲ್ಲಿ, ದತ್ತಕ ತಂದೆಯು ದತ್ತಕಳಿಗಿಂತ ಕೊನೆಯ ಪಕ್ಷ ಇಪ್ಪತ್ತೊಂದು ವರ್ಷ ದೊಡ್ಡವನಾಗಿರಬೇಕು;

(iv) ಮಹಿಳೆಯು ದತ್ತಕ ತೆಗೆದುಕೊಳ್ಳುವಲ್ಲಿ ಮತ್ತು ಪುರುಷನು ದತ್ತಕವಾಗಬೇಕಾಗಿರುವಲ್ಲಿ, ದತ್ತಕ ತಾಯಿಯು ದತ್ತಕನಿಗಿಂತ ಕೊನೆಯ ಪಕ್ಷ ಇಪ್ಪತ್ತೊಂದು ವರ್ಷ ದೊಡ್ಡವಳಾಗಿರಬೇಕು;

(v) ಒಂದೇ ಮಗುವನ್ನು ಏಕಕಾಲದಲ್ಲಿ ಇಬ್ಬರು ಅಥವಾ ಅದಕ್ಕೂ ಹೆಚ್ಚು ವ್ಯಕ್ತಿಗಳು ದತ್ತಕ ಮಾಡಿಕೊಳ್ಳಲಾಗದು;

(vi) ಮಗುವನ್ನು ದತ್ತಕನ ತಂದೆ-ತಾಯಿಗಳಿಂದ ಅಥವಾ ಸಂಬಂಧಿಸಿದ ಪಾಲಕನಿಂದ ಅಥವಾ ಅವರ ಪ್ರಾಧಿಕಾರದ ಮೇರೆಗೆ, ಅದು ಹುಟ್ಟಿದ ಕುಟುಂಬದಿಂದ ಅಥವಾ ತ್ಯಕ್ತ ಮಗುವಿನ ಅಥವಾ ತಂದೆ ತಾಯಿಗಳು ಗೊತ್ತಿಲ್ಲದ ಮಗುವಿನ ಸಂದರ್ಭದಲ್ಲಿ ಅದು ಬೆಳೆದು ಬಂದ ಸ್ಥಳದಿಂದ ಅಥವಾ ಕುಟುಂಬದಿಂದ ದತ್ತಕ ಕುಟುಂಬಕ್ಕೆ ವರ್ಗಾಯಿಸುವ ಉದ್ದೇಶದಿಂದ ದತ್ತಕವಾಗಲಿರುವ ಮಗುವನ್ನು ವಾಸ್ತವಿಕವಾಗಿ ದತ್ತಕ ಕೊಡತಕ್ಕುದು ಮತ್ತು ತೆಗೆದುಕೊಳ್ಳತಕ್ಕುದು:

ಪರಂತು, ದತ್ತಕದ ಕಾನೂನು ಮಾನ್ಯತೆಗೆ ದತ್ತು ಹೋಮದ ಆಚರಣೆಯು ಅವಶ್ಯಕವಾಗಿರತಕ್ಕುದಲ್ಲ.

12. ದತ್ತಕದ ಪರಿಣಾಮಗಳು:- ದತ್ತಕ ದಿನಾಂಕದಿಂದ ದತ್ತಕ ಮಗುವನ್ನು ದತ್ತಕ ತಂದೆ ಅಥವಾ ತಾಯಿಯ ಮಗುವೆಂದು ಎಲ್ಲ ಉದ್ದೇಶಗಳಿಗಾಗಿ ಭಾವಿಸಲ್ಪಡತಕ್ಕುದು ಮತ್ತು ಅಂಥ ದಿನಾಂಕದಿಂದ ಆ ಮಗುವಿನ ಹುಟ್ಟು ಕುಟುಂಬದ ಎಲ್ಲ ಸಂಬಂಧಗಳು ಕಡಿದುಹೋಗಿರುವುದಾಗಿ ಮತ್ತು ಅವು ದತ್ತಕದ ಕುಟುಂಬದಲ್ಲಿ ದತ್ತಕದ ಕಾರಣದಿಂದ ಪ್ರತಿಸ್ಥಾಪಿತವಾಗಿವೆ ಎಂದು ಭಾವಿಸತಕ್ಕುದು:

ಪರಂತು -

(ಎ) ಮಗು, ತನ್ನ ಹುಟ್ಟು ಕುಟುಂಬದಲ್ಲಿಯೇ ಮುಂದುವರಿದಿದ್ದರೆ, ತಾನು ಯಾವ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಿರಲಿಲ್ಲವೋ ಅಂಥ ವ್ಯಕ್ತಿಯನ್ನು ಮದುವೆಯಾಗಕೂಡದು;

(ಬಿ) ದತ್ತಕಕ್ಕೆ ಮುಂಚೆ ದತ್ತಕ ಮಗುವಿನಲ್ಲಿ ನಿಹಿತವಾದ ಯಾವುದೇ ಸ್ವತ್ತು, ಅವನ ಅಥವಾ ಅವಳ ಹುಟ್ಟು ಕುಟುಂಬದಲ್ಲಿಯ ಸಂಬಂಧಿಕರನ್ನು ಸಂರಕ್ಷಿಸಲು ಇರುವ ಹೊಣೆಯನ್ನೊಳಗೊಂಡು, ಅಂಥ ಸ್ವತ್ತಿನ ಒಡೆತನಕ್ಕೆ ಸಂಬಂಧಿಸಿದ ಹೊಣೆಗಳು, ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು ಅಂಥ ವ್ಯಕ್ತಿಯಲ್ಲಿ ನಿಹಿತವಾಗಿರುವುದು ಮುಂದುವರಿಯತಕ್ಕುದು;

(ಸಿ) ದತ್ತಕ ಮಗುವು ಯಾವ ವ್ಯಕ್ತಿಯಿಂದಲೂ, ದತ್ತಕಕ್ಕೆ ಮುಂಚೆ ಅವನಲ್ಲಿ ಅಥವಾ ಅವಳಲ್ಲಿ ನಿಹಿತವಾದ ಯಾವುದೇ ಸಂಪದವನ್ನು ಕಸಿದುಕೊಳ್ಳತಕ್ಕುದಲ್ಲ.

13. ತಮ್ಮ ಸ್ವತ್ತುಗಳನ್ನು ವಿಲೆ ಮಾಡಲು ದತ್ತಕ ತಂದೆ ತಾಯಿಗಳ ಹಕ್ಕು:- ತದ್ವಿರುದ್ಧವಾದ ಯಾವುದೇ ಒಪ್ಪಂದಕ್ಕೆ ಒಳಪಟ್ಟು, ದತ್ತಕ ತಂದೆಯು ಅಥವಾ ತಾಯಿಯು ಅವನ ಅಥವಾ ಅವಳ ಸ್ವತ್ತನ್ನು ಜೀವಿತ ವ್ಯಕ್ತಿಗಳ ನಡುವಣ ವರ್ಗಾವಣೆಯ ಮೂಲಕ ಅಥವಾ ಅವನ ಮರಣ ಶಾಸನದ ಮೂಲಕ ವಿಲೆ ಮಾಡುವ ಅಧಿಕಾರವನ್ನು ದತ್ತಕವು ತಪ್ಪಿಸುವುದಿಲ್ಲ.

14. ಕೆಲವು ಸಂದರ್ಭಗಳಲ್ಲಿ ದತ್ತಕ ತಾಯಿಯನ್ನು ನಿರ್ಧರಿಸುವಿಕೆ:- (1) ಪತ್ನಿಯು ಜೀವಂತವಾಗಿರುವ ಒಬ್ಬ ಹಿಂದುವು ಮಗುವನ್ನು ದತ್ತಕ ತೆಗೆದುಕೊಂಡ ಸಂದರ್ಭದಲ್ಲಿ, ಅವಳನ್ನು ದತ್ತಕ ತಾಯಿಯೆಂದು ಭಾವಿಸತಕ್ಕುದು.

(2) ಒಬ್ಬರಿಗಿಂತ ಹೆಚ್ಚು ಪತ್ನಿಯರ ಒಪ್ಪಿಗೆಯನ್ನು ಪಡೆದು ದತ್ತಕ ತೆಗೆದುಕೊಂಡಿರುವ ಸಂದರ್ಭದಲ್ಲಿ, ಅವರೊಳಗೆ ಮದುವೆಯಲ್ಲಿ ಜ್ಯೇಷ್ಠಳಾದವಳನ್ನು ದತ್ತಕ ತಾಯಿಯೆಂದು ಮತ್ತು ಇತರರನ್ನು ಮಲತಾಯಂದಿರೆಂದು ಭಾವಿಸತಕ್ಕುದು.

(3) ವಿಧುರ ಅಥವಾ ಅವಿವಾಹಿತನು ಮಗುವನ್ನು ದತ್ತಕ ತೆಗೆದುಕೊಂಡಿರುವಲ್ಲಿ, ಆ ತರುವಾಯ ಅವಳು ಮದುವೆಯಾಗುವ ಅವನ ಪತ್ನಿಯು ದತ್ತಕ ಮಗುವಿನ ಮಲತಾಯಿಯೆಂದು ಭಾವಿಸತಕ್ಕುದು.

(4) ವಿಧವೆ ಅಥವಾ ಅವಿವಾಹಿತ ಮಹಿಳೆಯು ಮಗುವನ್ನು ದತ್ತಕ ತೆಗೆದು ಕೊಂಡಿರುವಲ್ಲಿ ಆ ತರುವಾಯ ಮದುವೆಯಾಗುವ ಪತಿಯು ದತ್ತಕ ಮಗುವಿನ ಮಲತಂದೆಯೆಂದು ಭಾವಿಸತಕ್ಕುದು.

15. ಕಾನೂನುಮಾನ್ಯ ದತ್ತಕವು ರದ್ದಾಗತಕ್ಕದಲ್ಲ:- ಕಾನೂನು ಮಾನ್ಯವಾಗಿ ಮಾಡಿದ ಯಾವುದೇ ದತ್ತಕವನ್ನು, ದತ್ತಕ ತಂದೆ ಅಥವಾ ತಾಯಿ ಅಥವಾ ಇತರ ಯಾವನೇ ವ್ಯಕ್ತಿಯು ರದ್ದುಗೊಳಿಸತಕ್ಕುದಲ್ಲ ಅಥವಾ ದತ್ತಕ ಮಗುವು ಅವನ ಅಥವಾ ಅವಳ ಅಂಥ ಸ್ಥಾನಮಾನವನ್ನು ಪರಿತ್ಯಜಿಸತಕ್ಕುದಲ್ಲ ಮತ್ತು ಅವನ ಅಥವಾ ಅವಳ ಹುಟ್ಟು ಕುಟುಂಬಕ್ಕೆ ವಾಪಸಾಗತಕ್ಕುದಲ್ಲ.

16. ದತ್ತಕಗಳಿಗೆ ಸಂಬಂಧಿಸಿದ ನೋಂದಾಯಿತ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ:- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿಸಲಾದ, ಮಾಡಿದ ದತ್ತಕದ ಅಭಿಲೇಖವಿರುವಂತೆ ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಯಾವುದೇ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಮತ್ತು ಅದಕ್ಕೆ ಮಗುವನ್ನು ದತ್ತಕ ಕೊಡುವ ಮತ್ತು ತೆಗೆದುಕೊಳ್ಳುವ ವ್ಯಕ್ತಿಗಳು ರುಜುಮಾಡಿರುವಾಗ, ದತ್ತಕವು ಸುಳ್ಳೆಂದು ಸ್ಥಾಪಿಸುವ ಹೊರತು ಮತ್ತು ವರೆಗೆ ಅದನ್ನು ಈ ಅಧಿನಿಯಮದ ಉಪಬಂಧಗಳನ್ನು ಅನುವರ್ತಿಸಿ ಮಾಡಲಾಗಿದೆಯೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕುದು.

17. ಕೆಲವು ಸಂದಾಯಗಳ ನಿಷೇದ:- (1) ಈ ಪ್ರಕರಣದ ಮೂಲಕ ಯಾವ ಸಂದಾಯ ಅಥವಾ ಬಹುಮಾನ ಪಡೆಯುವುದನ್ನು ನಿಷೇಧಿಸಲಾಗಿದೆಯೋ ಆ ಸಂದಾಯವನ್ನು ಅಥವಾ ಇತರ ಬಹುಮಾನವನ್ನು ಯಾವನೇ ವ್ಯಕ್ತಿಯ ದತ್ತಕದ ಪ್ರತಿಫಲವಾಗಿ ಯಾವನೇ

ವ್ಯಕ್ತಿಯು ಸ್ವೀಕರಿಸತಕ್ಕುದಲ್ಲ ಅಥವಾ ಸ್ವೀಕರಿಸಲು ಒಪ್ಪತಕ್ಕುದಲ್ಲ ಮತ್ತು ಯಾವನೇ ವ್ಯಕ್ತಿಯು ಯಾವುದೇ ಸಂದಾಯವನ್ನು ಅಥವಾ ಬಹುಮಾನವನ್ನು ಇತರೆ ಯಾವನೇ ವ್ಯಕ್ತಿಗೆ ಮಾಡತಕ್ಕುದಲ್ಲ ಅಥವಾ ಕೊಡತಕ್ಕುದಲ್ಲ ಅಥವಾ ಮಾಡಲು ಅಥವಾ ಕೊಡಲು ಒಪ್ಪತಕ್ಕುದಲ್ಲ.

(2) ಯಾವನೇ ವ್ಯಕ್ತಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾದ ಅಧಿಕಾರಿಯ ಪೂರ್ವ ಮಂಜೂರಾತಿ ಇಲ್ಲದೆ ಈ ಪ್ರಕರಣದ ಮೇರೆಗೆ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕುದಲ್ಲ.

## ಅಧ್ಯಾಯ-III

### ಜೀವನಾಂಶ

18. ಪತ್ನಿಯ ಪೋಷಣೆ:- (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ವಿವಾಹವಾದ ಹಿಂದೂ ಪತ್ನಿಯು ಅವಳ ಜೀವನ ಪರ್ಯಂತ ಅವಳ ಗಂಡನಿಂದ ಸುರಕ್ಷಿತಳಾಗಲು ಹಕ್ಕುಳ್ಳವಳಾಗಿರತಕ್ಕುದು.

(2) ಹಿಂದೂಪತ್ನಿಯು ತನ್ನ ಜೀವನಾಂಶದ ಹಕ್ಕನ್ನು ಕಳೆದುಕೊಳ್ಳದೆ, ತನ್ನ ಗಂಡನಿಂದ ಪ್ರತ್ಯೇಕವಾಗಿ ವಾಸಿಸಲು ಈ ಕೆಳಕಂಡ ಸಂದರ್ಭಗಳಲ್ಲಿ ಹಕ್ಕುಳ್ಳವಳಾಗಿರತಕ್ಕುದು:-

(ಎ) ಅವನು ತ್ಯಜಿಸಿ ತಪ್ಪು ಮಾಡಿದ್ದರೆ, ಎಂದರೆ ಯುಕ್ತ ಕಾರಣವಿಲ್ಲದೆಯೆ ಮತ್ತು ಅವಳ ಒಪ್ಪಿಗೆ ಇಲ್ಲದೆ ಅಥವಾ ಅವಳ ಇಚ್ಛೆಗೆ ವಿರೋಧವಾಗಿ ಅವಳನ್ನು ತ್ಯಜಿಸಿದ್ದರೆ ಅಥವಾ ಬುದ್ಧಿ ಪೂರ್ವಕವಾಗಿ ಅವಳನ್ನು ಉಪೇಕ್ಷಿಸಿದ್ದರೆ;

(ಬಿ) ಅವಳು ತನ್ನ ಗಂಡನೊಡನೆ ವಾಸಿಸುವುದು ಹಾನಿಕಾರಕ ಅಥವಾ ಕ್ಷತಿಕಾರಕ ಎಂಬ ಸಕಾರಣ ಭಯವು ಅವಳ ಮನಸ್ಸಿನಲ್ಲಿ ಉಂಟಾಗುವಷ್ಟು ಕ್ರೂರ ರೀತಿಯಲ್ಲಿ ಅವನು ಅವಳೊಡನೆ ವರ್ತಿಸಿದ್ದರೆ;

(ಸಿ) ಅವನು ಉಗ್ರರೂಪದ ಕುಷ್ಠ ರೋಗದಿಂದ ನರಳುತ್ತಿದ್ದರೆ;

(ಡಿ) ಅವನಿಗೆ ಬೇರೊಬ್ಬ ಜೀವಂತ ಪತ್ನಿ ಇದ್ದರೆ;

(ಇ) ಅವನು, ತನ್ನ ಪತ್ನಿಯು ವಾಸಿಸುವ ಮನೆಯಲ್ಲಿಯೇ ಒಬ್ಬಳು ಉಪ ಪತ್ನಿಯನ್ನು ಇಟ್ಟುಕೊಂಡಿದ್ದರೆ ಅಥವಾ ಉಪಪತ್ನಿಯೊಂದಿಗೆ ಬೇರೆಡೆಯಲ್ಲಿ ರೂಢಿಯಾಗಿ ವಾಸಿಸುತ್ತಿದ್ದರೆ;

(ಎಫ್) ಬೇರೊಂದು ಮತಕ್ಕೆ ಮತಾಂತರ ಹೊಂದಿರುವುದರಿಂದ ಅವನು ಹಿಂದುವಾಗಿರುವುದು ಕೊನೆಗೊಂಡಿದ್ದರೆ;

(ಜಿ) ಅವಳು ಪ್ರತ್ಯೇಕವಾಗಿ ವಾಸಿಸುವುದನ್ನು ಸಮರ್ಥಿಸುವಂತಹ ಇತರ ಯಾವುದಾದರೂ ಕಾರಣವಿದ್ದರೆ.

(3) ಒಬ್ಬ ಹಿಂದೂ ಪತ್ನಿಯು ಶೀಲಭ್ರಷ್ಟಳಾಗಿದ್ದರೆ, ಅಥವಾ ಮತಾಂತರರಿಂದ ಹಿಂದೂ ಆಗಿರುವುದು ಕೊನೆಗೊಂಡಿದ್ದರೆ ಅವಳು ತನ್ನ ಗಂಡನಿಂದ ಪ್ರತ್ಯೇಕ ವಸತಿ ಮತ್ತು ಜೀವನಾಂಶವನ್ನು ಪಡೆಯಲು ಹಕ್ಕುಳ್ಳವಳಾಗಿರತಕ್ಕುದಲ್ಲ.

19. ವಿಧವೆಯಾದ ಸೊಸೆಯ ಪೋಷಣೆ:- (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಮದುವೆಯಾದ ಹಿಂದೂ ಪತ್ನಿಯು, ತನ್ನ ಪತಿಯ ಮರಣಾನಂತರ, ಅವಳ ಮಾವನಿಂದ ಸಂರಕ್ಷಿತಳಾಗಲು ಹಕ್ಕುಳ್ಳವಳಾಗಿರತಕ್ಕುದು:

ಪರಂತು, ಅವಳು ತನ್ನ ಸ್ವಂತ ಸಂಪಾದನೆಯಿಂದ ಅಥವಾ ಇತರ ಸ್ವತ್ತಿನಿಂದ ತನ್ನನ್ನು ಪೋಷಿಸಿಕೊಳ್ಳಲು ಅಸಮರ್ಥಳಾಗಿದ್ದರೆ ಅಥವಾ ಅವಳಿಗೆ ತನ್ನ ಸ್ವಂತ ಸ್ವತ್ತು ಇಲ್ಲದೆ ಇದ್ದು,-

(ಎ) ಅವಳ ಗಂಡನ ಅಥವಾ ಅವಳ ತಂದೆಯ ಅಥವಾ ತಾಯಿಯ ಸಂಪದದಿಂದ, ಅಥವಾ

(ಬಿ) ಅವಳ ಮಗ ಅಥವಾ ಮಗಳು, ಯಾರಾದರೂ ಇದ್ದರೆ ಅವರಿಂದ, ಅಥವಾ ಅವನ ಅಥವಾ ಅವಳ ಸಂಪದದಿಂದ

-ಪೋಷಣೆ ಪಡೆಯಲು ಅಸಮರ್ಥಳಾಗಿರುವಷ್ಟರ ಮಟ್ಟಿಗೆ.

(2) ಸೊಸೆಯು ಯಾವುದೇ ಭಾಗವನ್ನು ಪಡೆಯದೆ ಇರುವ ಮಾವನ ಸ್ವಾಧೀನದಲ್ಲಿರುವ ಯಾವುದೇ ದಾಯಾದಿ ಸ್ವತ್ತಿನಿಂದ ಹಾಗೆ ಮಾಡಲು ಅವನಿಗೆ ಸಾಧನವಿಲ್ಲದಿದ್ದಲ್ಲಿ (1)ನೆಯ ಉಪಪ್ರಕರಣದ ಮೇರೆಗೆ ಯಾವುದೇ ಹೊಣೆಗಾರಿಕೆಯನ್ನು ಜಾರಿಗೊಳಿಸತಕ್ಕುದಲ್ಲ ಮತ್ತು ಅಂಥ ಹೊಣೆಗಾರಿಕೆಯು ಸೊಸೆಯ ಪುನರ್ವಿವಾಹದೊಡನೆ ಕೊನೆಗೊಳ್ಳತಕ್ಕುದು.

20. ಮಕ್ಕಳ ಮತ್ತು ವೃದ್ಧ ತಂದೆ ತಾಯಿಗಳ ಪೋಷಣೆ:- (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಹಿಂದುವು ಅವನ ಅಥವಾ ಅವಳ ಜೀವನ ಪರ್ಯಂತ ಅವನ ಅಥವಾ ಅವಳ ಔರಸ ಅಥವಾ ಅನೌರಸ ಮಕ್ಕಳನ್ನು ಮತ್ತು ಅವನ ಅಥವಾ ಅವಳ ವೃದ್ಧ ಅಥವಾ ದುರ್ಬಲ ತಂದೆ ತಾಯಿಗಳನ್ನು ಪೋಷಿಸಲು ಬದ್ಧನಾಗಿರತಕ್ಕುದು.

(2) ಔರಸ ಅಥವಾ ಅನೌರಸ ಮಗುವು, ತನ್ನ ತಂದೆ ಅಥವಾ ತಾಯಿಯಿಂದ, ತಾನು ಅಪ್ರಾಪ್ತ ವಯಸ್ಕನಾಗಿರುವಷ್ಟು ಕಾಲ ಪೋಷಣೆ ಪಡೆಯಬಹುದು.

(3) ಸಂದರ್ಭಾನುಸಾರ ತಂದೆ-ತಾಯಿ ಅಥವಾ ಅವಿವಾಹಿತ ಮಗಳು, ಅವನ ಅಥವಾ ಅವಳ ಸ್ವಂತ ಸಂಪಾದನೆಯಿಂದ ಅಥವಾ ಇತರ ಸ್ವತ್ತಿನಿಂದ ಅವನನ್ನು ಅಥವಾ ಅವಳನ್ನು ಪೋಷಿಸಿಕೊಳ್ಳಲು ಅಸಮರ್ಥವಾಗಿರುವಷ್ಟರ ಮಟ್ಟಿಗೆ, ತನ್ನ ವೃದ್ಧ ಅಥವಾ ದುರ್ಬಲ ತಂದೆ ತಾಯಿಗಳನ್ನು ಅಥವಾ ಅವಿವಾಹಿತ ಮಗಳನ್ನು ಪೋಷಿಸುವ ವ್ಯಕ್ತಿಯ ಹೊಣೆಗಾರಿಕೆಯು ವಿಸ್ತರಿಸುತ್ತದೆ.

ವಿವರಣೆ:- ಈ ಪ್ರಕರಣದಲ್ಲಿ "ತಂದೆ ಅಥವಾ ತಾಯಿ" ಎಂಬುದು ಮಕ್ಕಳಿಲ್ಲದ ಮಲತಾಯಿಯನ್ನು ಒಳಗೊಳ್ಳುತ್ತದೆ.

21. ಆಶ್ರಿತರು ಎಂಬುದರ ಪರಿಭಾಷೆ:- ಈ ಅಧ್ಯಾಯದ ಉದ್ದೇಶಗಳಿಗಾಗಿ "ಆಶ್ರಿತರು" ಎಂದರೆ, ಮೃತನ ಈ ಕೆಳಕಂಡ ಸಂಬಂಧಿಗಳು-

(i) ಅವನ ಅಥವಾ ಅವಳ ತಂದೆ;

(ii) ಅವನ ಅಥವಾ ಅವಳ ತಾಯಿ;

(iii) ಅವನ ವಿಧವೆ, ಅವಳು ಪುನರ್ವಿವಾಹವಾಗದಿರುವವರೆಗೆ;

(iv) ಅವನ ಅಥವಾ ಅವಳ ಮಗ ಅಥವಾ ಹಿಂದೆ ಮೃತನಾದ ಅವನ ಮಗನ ಮಗ ಅಥವಾ ಅವನ ಹಿಂದೆ ಮೃತನಾದ ಮಗನ ಹಿಂದೆ ಮೃತನಾದ ಮಗನ ಮಗ; ಅವನು ಅಪ್ರಾಪ್ತ ವಯಸ್ಕನಾಗಿರುವವರೆಗೆ:

ಪರಂತು, ಮೊಮ್ಮಗನ ಸಂದರ್ಭದಲ್ಲಿ ಅವನ ತಂದೆಯ ಅಥವಾ ತಾಯಿಯ ಸಂಪದದಿಂದ, ಮತ್ತು ಮರಿ ಮೊಮ್ಮಗನ ಸಂದರ್ಭದಲ್ಲಿ ಅವನ ತಂದೆ ಅಥವಾ ತಾಯಿಯ ಅಥವಾ ತಂದೆಯ ತಂದೆ ಅಥವಾ ತಂದೆಯ ತಾಯಿಯ ಸಂಪದದಿಂದ ಪೋಷಣೆಯನ್ನು ಪಡೆಯಲು ಅವನು ಅಸಮರ್ಥನಾಗಿರುವಷ್ಟರ ಮಟ್ಟಿಗೆ;

(v) ಅವನ ಅಥವಾ ಅವಳ ಅವಿವಾಹಿತ ಮಗಳು ಅಥವಾ ಹಿಂದೆ ಮೃತನಾದ ಅವನ ಮಗನ ಅವಿವಾಹಿತ ಮಗಳು ಅಥವಾ ಅವನ ಹಿಂದೆ ಮೃತನಾದ ಮಗನ ಹಿಂದೆ ಮೃತನಾದ ಮಗನ ಅವಿವಾಹಿತ ಮಗಳು; ಅವಳು ಅವಿವಾಹಿತಳಾಗಿರುವವರೆಗೆ:

ಪರಂತು, ಮೊಮ್ಮಗಳ ಸಂದರ್ಭದಲ್ಲಿ ಅವಳ ತಂದೆಯ ಅಥವಾ ತಾಯಿಯ ಸಂಪದದಿಂದ ಮತ್ತು ಮರಿ ಮೊಮ್ಮಗಳ ಸಂದರ್ಭದಲ್ಲಿ ಅವಳ ತಂದೆಯ ಅಥವಾ ತಾಯಿಯ ಅಥವಾ ತಂದೆಯ ತಂದೆಯ ಅಥವಾ ತಂದೆಯ ತಾಯಿಯ ಸಂಪದದಿಂದ ಪೋಷಣೆಯನ್ನು ಪಡೆಯಲು ಅವಳು ಅಸಮರ್ಥಳಾಗಿರುವಷ್ಟರ ಮಟ್ಟಿಗೆ;

(vi) ವಿಧವೆಯಾದ ಅವನ ಮಗಳು; ಪರಂತು ಮತ್ತು

(ಎ) ತನ್ನ ಪತಿಯ ಸಂಪದದಿಂದ; ಅಥವಾ

(ಬಿ) ಅವಳ ಮಗ ಅಥವಾ ಮಗಳು ಯಾರಾದರೂ ಇದ್ದರೆ, ಅವರಿಂದ ಅಥವಾ ಅವನ ಅಥವಾ ಅವಳ ಸಂಪದದಿಂದ; ಅಥವಾ

(ಸಿ) ಅವಳ ಮಾವನಿಂದ ಅಥವಾ ಅವನ ತಂದೆಯಿಂದ ಅಥವಾ ಅವರಿಬ್ಬರಲ್ಲಿ ಯಾರೊಬ್ಬರ ಸಂಪದದಿಂದ

-ಪೋಷಣೆ ಪಡೆಯಲು ಅವಳು ಅಸಮರ್ಥಳಾಗಿರುವಷ್ಟರ ಮಟ್ಟಿಗೆ;

(vii) ಅವನ ಮಗನ ಅಥವಾ ಅವನ ಹಿಂದೆ ಮೃತನಾದ ಮಗನ ಮಗನ ವಿಧವೆ, ಅವಳು ಪುನರ್ವಿವಾಹವಾಗದಿರುವವರೆಗೆ:

ಪರಂತು, ಮತ್ತು ಅವಳು, ತನ್ನ ಪತಿಯ ಸಂಪದದಿಂದ ಅಥವಾ ತನ್ನ ಮಗ ಅಥವಾ ಮಗಳು ಯಾರಾದರೂ ಇದ್ದರೆ ಅವರಿಂದ ಅಥವಾ ಅವನ ಅಥವಾ ಅವಳ ಸಂಪದದಿಂದ ಅಥವಾ ಮೊಮ್ಮಗನ ವಿಧವೆಯ ಸಂದರ್ಭದಲ್ಲಿ, ಅವಳ ಮಾವನ ಸಂಪದದಿಂದಲೂ ಸಹ ಪೋಷಣೆ ಪಡೆಯಲು ಅಸಮರ್ಥಳಾಗಿರುವಷ್ಟರ ಮಟ್ಟಿಗೆ;

(viii) ಅವನ ಅಥವಾ ಅವಳ ಅಪ್ರಾಪ್ತ ವಯಸ್ಕನಾದ ಅನೌರಸ ಮಗ, ಅವನು ಅಪ್ರಾಪ್ತ ವಯಸ್ಕನಾಗಿರುವವರೆಗೆ;

(ix) ಅವನ ಅಥವಾ ಅವಳ ಅನೌರಸ ಮಗಳು; ಅವಳು ಅವಿವಾಹಿತಳಾಗಿರುವವರೆಗೆ.

22. ಆಶ್ರಿತರ ಪೋಷಣೆ:- (1) (2)ನೆಯ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಮೃತ ಹಿಂದೂವಿನ ವಾರಸುದಾರರು ಮೃತನಿಂದ ಅವರಿಗೆ ವಾರಸಾಗಿ ಬಂದ ಸಂಪದದಿಂದ ಮೃತನ ಆಶ್ರಿತರನ್ನು ಪೋಷಿಸಲು ಬದ್ಧರಾಗಿರುತ್ತಾರೆ.

(2) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಮೃತನಾದ ಹಿಂದೂವಿನ ಸಂಪದದಲ್ಲಿ ಮರಣ ಶಾಸನ ಮೂಲಕ ಅಥವಾ ಮರಣ ಶಾಸನವಿಲ್ಲದೆಯೇ ಯಾವುದೇ ಪಾಲನ್ನು ಉತ್ತರಾಧಿಕಾರಿಯಾಗಿ ಪಡೆಯದ ಆಶ್ರಿತನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅಂಥ ಸಂಪದವನ್ನು ಪಡೆಯುವವರಿಂದ ಜೀವನಾಂಶವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕುದು.

(3) ಆ ಸಂಪದವನ್ನು ಪಡೆಯುವ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನ ಹೊಣೆಯು ಅವನ ಅಥವಾ ಅವಳು ಪಡೆದ ಸಂಪದದ ಪಾಲು ಅಥವಾ ಭಾಗದ ಮೌಲ್ಯಕ್ಕೆ ಅನುಪಾತಿಯಾಗಿರತಕ್ಕುದು.

(4) (2)ನೆಯ ಅಥವಾ (3)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ, ಸ್ವತಃ ಆಶ್ರಿತನಾ (ಳಾ)ಗಿರುವ ಯಾವ ವ್ಯಕ್ತಿಯು, ಅವನು ಅಥವಾ ಅವಳು ಪಡೆದಿರುವ ಪಾಲಿನ ಅಥವಾ ಭಾಗದ ಮೌಲ್ಯವು, ಜೀವನಾಂಶದ ಕೊಡುಗೆಯನ್ನು ನೀಡುವ ಹೊಣೆಗಾರಿಕೆಯನ್ನು

ಜಾರಿಗೊಳಿಸಿದಲ್ಲಿ, ಈ ಅಧಿನಿಯಮದ ಮೇರೆಗೆ ಜೀವನಾಂಶದ ರೂಪದಲ್ಲಿ ಅವನಿಗೆ ಅಥವಾ ಅವಳಿಗೆ ಕೊಡಬಹುದಾದುದಕ್ಕಿಂತ ಕಡಿಮೆಯಾದರೆ ಅಥವಾ ಕಡಿಮೆಯಾಗಬಹುದಾದರೆ ಇತರ ಜೀವನಾಂಶಕ್ಕೆ ಕೊಡುಗೆ ನೀಡಲು ಹೊಣೆಗಾರನಾ(ಳಾ)ಗತಕ್ಕುದಲ್ಲ.

23. ಜೀವನಾಂಶದ ಮೊಬಲಗು:- (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಜೀವನಾಂಶವನ್ನು ಕೊಡಬೇಕೇ ಮತ್ತು ಹಾಗೆ ಕೊಡಬೇಕಾಗಿದ್ದಲ್ಲಿ ಎಷ್ಟು ಎಂಬುದನ್ನು ನಿರ್ಧರಿಸುವುದು ನ್ಯಾಯಾಲಯದ ವಿವೇಚನೆಗೆ ಸೇರಿರತಕ್ಕುದು, ಮತ್ತು ಹಾಗೆ ಮಾಡುವಾಗ, ನ್ಯಾಯಾಲಯವು ಸಂದರ್ಭಾನುಸಾರ, ಅವು ಅನ್ವಯಿಸಬಹುದಾದಷ್ಟರ ಮಟ್ಟಿಗೆ (2) ಅಥವಾ (3)ನೆಯ ಉಪಪ್ರಕರಣಗಳಲ್ಲಿ ನಮೂದಿಸಲಾದ ವಿಷಯಗಳಿಗೆ ಸೂಕ್ತ ಗಮನವನ್ನು ಕೊಡತಕ್ಕುದು.

(2) ಈ ಅಧಿನಿಯಮದ ಮೇರೆಗೆ ಪತ್ನಿಗೆ, ಮಕ್ಕಳಿಗೆ ಅಥವಾ ವೃದ್ಧ ಅಥವಾ ದುರ್ಬಲ ತಂದೆ ತಾಯಿಗಳಿಗೆ ಕೊಡತಕ್ಕ ಜೀವನಾಂಶದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ನಿರ್ಧರಿಸುವಲ್ಲಿ,-

(ಎ) ಪಕ್ಷಕಾರರ ಸ್ಥಿತಿ ಮತ್ತು ಸ್ಥಾನಮಾನಗಳಿಗೆ ;

(ಬಿ) ಕ್ಲೇಮುದಾರನ ಯುಕ್ತ ಅವಶ್ಯಕತೆಗಳಿಗೆ;

(ಸಿ) ಕ್ಲೇಮುದಾರನು ಪ್ರತ್ಯೇಕವಾಗಿ ವಾಸಿಸುತ್ತಿದ್ದರೆ, ಕ್ಲೇಮುದಾರನು ಹಾಗೆ ಮಾಡುವುದು ನ್ಯಾಯೋಚಿತವಾಗಿದೆಯೇ ಎಂಬುದಕ್ಕೆ;

(ಡಿ) ಕ್ಲೇಮುದಾರನ ಸ್ವತ್ತಿನ ಮೌಲ್ಯ ಮತ್ತು ಅಂಥ ಸ್ವತ್ತಿನಿಂದ ಅಥವಾ ಕ್ಲೇಮುದಾರನ ಸ್ವಂತ ಸಂಪಾದನೆಯಿಂದ ಅಥವಾ ಇತರ ಯಾವುದೇ ಮೂಲದಿಂದ ಬರುವ ಯಾವುದೇ ಆದಾಯಕ್ಕೆ;

(ಇ) ಈ ಅಧಿನಿಯಮದ ಮೇರೆಗೆ ಜೀವನಾಂಶಕ್ಕೆ ಹಕ್ಕುಳ್ಳ ವ್ಯಕ್ತಿಗಳ ಸಂಖ್ಯೆಗೆ

-ಗಮನವನ್ನು ಕೊಡತಕ್ಕುದು.

(3) ಈ ಅಧಿನಿಯಮದ ಮೇರೆಗೆ ಒಬ್ಬ ಆಶ್ರಿತನಿಗೆ ಕೊಡತಕ್ಕ ಜೀವನಾಂಶದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ನಿರ್ಧರಿಸುವಲ್ಲಿ ,-

(ಎ) ಮೃತನ ಋಣಗಳ ತೀರ್ವೆಗೆ ಅವಕಾಶ ಮಾಡಿದ ತರುವಾಯ ಅವನ ಸಂಪದದ ನಿವ್ವಳ ಮೌಲ್ಯಕ್ಕೆ;

(ಬಿ) ಮೃತನ ಮರಣ ಶಾಸನದ ಮೇರೆಗೆ ಆಶ್ರಿತನ ಬಗ್ಗೆ ಏನಾದರೂ ಅವಕಾಶ ಕಲ್ಪಿಸಿದ್ದರೆ ಅದಕ್ಕೆ;

(ಸಿ) ಇಬ್ಬರ ನಡುವಣ ಬಾಂಧವ್ಯ ಶ್ರೇಣಿಗೆ;

(ಡಿ) ಆಶ್ರಿತನ ಯುಕ್ತ ಅವಶ್ಯಕತೆಗಳಿಗೆ;

(ಇ) ಆಶ್ರಿತ ಮತ್ತು ಮೃತನ ನಡುವಣ ಹಿಂದಿನ ಬಾಂಧವ್ಯಗಳಿಗೆ;

(ಎಫ್) ಆಶ್ರಿತನ ಸ್ವತ್ತಿನ ಮೌಲ್ಯಕ್ಕೆ ಮತ್ತು ಅಂಥ ಸ್ವತ್ತಿನಿಂದ ಅಥವಾ ಅವನ ಅಥವಾ ಅವಳ ಸಂಪಾದನೆಯಿಂದ ಅಥವಾ ಇತರ ಯಾವುದೇ ಮೂಲದಿಂದ ಬಂದ ಯಾವುದೇ ಆದಾಯಕ್ಕೆ;

(ಜಿ) ಈ ಅಧಿನಿಯಮದ ಮೇರೆಗೆ ಜೀವನಾಂಶಕ್ಕೆ ಹಕ್ಕುಳ್ಳ ಆಶ್ರಿತರ ಸಂಖ್ಯೆಗೆ;

-ಗಮನ ಕೊಡತಕ್ಕುದು.

24. ಜೀವನಾಂಶದ ಕ್ಲೇಮುದಾರನು ಹಿಂದುವಾಗಿರತಕ್ಕುದು:- ಬೇರೊಂದು ಮತಕ್ಕೆ ಮತಾಂತರ ಹೊಂದುವ ಮೂಲಕ ಅವನು ಅಥವಾ ಅವಳು ಹಿಂದುವಾಗಿರುವುದು ಕೊನೆಗೊಂಡಿರುವಲ್ಲಿ, ಈ ಅಧ್ಯಾಯದ ಮೇರೆಗೆ ಜೀವನಾಂಶವನ್ನು ಕೇಳಲು ಯಾವ ವ್ಯಕ್ತಿಯೂ ಹಕ್ಕುಳ್ಳವನಾ(ಳಾ)ಗಿರತಕ್ಕುದಲ್ಲ.

25. ಸನ್ನಿವೇಶಗಳ ಬದಲಾವಣೆಯಿಂದ ಜೀವನಾಂಶದ ಮೊಬಲಗನ್ನು ವ್ಯತ್ಯಾಸ ಮಾಡಬಹುದು:- ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ನ್ಯಾಯಾಲಯದ ಡಿಕ್ರಿ ಅಥವಾ ಒಪ್ಪಂದದ ಮೂಲಕ ನಿಗದಿಪಡಿಸಲಾದ ಜೀವನಾಂಶದ ಮೊಬಲಗನ್ನು, ಅಂಥ ವ್ಯತ್ಯಾಸವನ್ನು ಸಮರ್ಥಿಸುವಂತಹ ಮುಖ್ಯವಾದ ಬದಲಾವಣೆ ಸನ್ನಿವೇಶಗಳಲ್ಲಿ ಆಗಿದ್ದರೆ, ಅನಂತರ ವ್ಯತ್ಯಾಸ ಮಾಡಬಹುದು.

26. ಋಣಗಳಿಗೆ ಆದ್ಯತೆ ಇರಬೇಕು:- 27ನೆಯ ಪ್ರಕರಣದಲ್ಲಿ ಇರುವ ಉಪಬಂಧಗಳಿಗೊಳಪಟ್ಟು, ಮೃತನು ತೆಗೆದುಕೊಂಡಿರುವ ಅಥವಾ ಸಂದಾಯ ಮಾಡಬೇಕಾಗಿರುವ ಎಲ್ಲ ವಿಧದ ಋಣಗಳು, ಈ ಅಧಿನಿಯಮದ ಮೇರೆಗಿನ ಆಶ್ರಿತರ ಜೀವನಾಂಶದ ಕ್ಲೇಮುಗಳ ಮೇಲೆ ಆದ್ಯತೆ ಪಡೆದಿರತಕ್ಕುದು.

27. ಜೀವನಾಂಶವು ಯಾವಾಗ ಪ್ರಭಾರವಾಗತಕ್ಕುದು:- ಮೃತನ ಮರಣ ಶಾಸನದ ಮೂಲಕ, ನ್ಯಾಯಾಲಯದ ಡಿಕ್ರಿಯ ಮೂಲಕ, ಆಶ್ರಿತನ ಮತ್ತು ಸಂಪದದ ಅಥವಾ ಅದರ ಭಾಗದ ಒಡೆಯನ ನಡುವಣ ಒಪ್ಪಂದದ ಮೂಲಕ ಅಥವಾ ಅನ್ಯಥಾ ಸೃಜಿಸಲಾಗಿದ್ದ ಹೊರತು ಈ ಅಧಿನಿಯಮದ ಮೇರೆಗಿನ ಆಶ್ರಿತರ ಜೀವನಾಂಶದ ಕ್ಲೇಮು, ಮೃತನ ಸಂಪದದ ಅಥವಾ ಅದರ ಯಾವುದೇ ಭಾಗದ ಮೇಲೆ ಪ್ರಭಾರವಾಗತಕ್ಕುದಲ್ಲ.

28. ಜೀವನಾಂಶದ ಹಕ್ಕಿನ ಮೇಲೆ ಸ್ವತ್ತಿನ ವರ್ಗಾವಣೆಯ ಪರಿಣಾಮ:- ಒಂದು ಸಂಪದದಿಂದ ಜೀವನಾಂಶವನ್ನು ಪಡೆಯಲು ಒಬ್ಬ ಆಶ್ರಿತನಿಗೆ ಹಕ್ಕಿದ್ದರೆ ಮತ್ತು ಅಂಥ ಸಂಪದವು ಅಥವಾ ಅದರ ಯಾವುದೇ ಭಾಗವು ವರ್ಗಾವಣೆಯಾಗಿರುವಲ್ಲಿ, ವರ್ಗಾವಣೆ ಪಡೆದವನಿಗೆ ಆ ಹಕ್ಕಿನ ತಿಳುವಳಿಕೆಯಿದ್ದಲ್ಲಿ ಅಥವಾ ಆ ವರ್ಗಾವಣೆಯು ಪ್ರತಿಫಲ ರಹಿತವಾಗಿದ್ದಲ್ಲಿ, ಜೀವನಾಂಶವನ್ನು ಪಡೆಯುವ ಅಧಿಕಾರವನ್ನು ವರ್ಗಾವಣೆ ಪಡೆದವನ ವಿರುದ್ಧ ಜಾರಿಗೊಳಿಸಬಹುದು; ಆದರೆ ಪ್ರತಿಫಲ ಕೊಟ್ಟು ಮತ್ತು ಹಕ್ಕಿನ ತಿಳಿವಳಿಕೆ ಇಲ್ಲದೆ ವರ್ಗಾವಣೆ ಪಡೆದವನ ವಿರುದ್ಧ ಅದನ್ನು ಜಾರಿಗೊಳಿಸಲಾಗುವುದಿಲ್ಲ.

## ಅಧ್ಯಾಯ-IV

### ನಿರಸನಗಳು ಮತ್ತು ಉಳಿಸುವಿಕೆಗಳು

29. ನಿರಸನಗಳು:- (ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ 1960ರ 58ನೇ ಅಧಿನಿಯಮದ ಮೂಲಕ ನಿರಸನಗೊಳಿಸಲಾಗಿದೆ.)

30. ಉಳಿಸುವಿಕೆಗಳು:- ಈ ಅಧಿನಿಯಮದಲ್ಲಿರುವುದು ಯಾವುದಕ್ಕೂ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ದತ್ತಕದ ಮೇಲೆ ಪರಿಣಮಕಾರಿಯಾಗತಕ್ಕುದಲ್ಲ ಮತ್ತು ಅಂಥ ಯಾವುದೇ ದತ್ತಕದ ವಿಧಿಮಾನ್ಯತೆ ಮತ್ತು ಪರಿಣಾಮವು ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಹೇಗೋ ಹಾಗೆ ನಿರ್ಧರಿಸಲ್ಪಡತಕ್ಕುದು.

* * * *

ಮುದ್ರಕರು : ನಿರ್ದೇಶಕರು,ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ.683/ C/4